ಓ ಎಸ್ ನಂಃ 119/2019

ಪಿ. ಡಬ್ಲ್ಯೂ ಃ 1

ದಿಃ 06.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ

ನಿ ಪಿ 10 ರಲ್ಲಿ 11 ಇ ನಕ್ಷೆ ತಯಾರಿಸಲು ಸಾಧ್ಯವಾಗದ ಕಾರಣ ಗಂಗಮ್ಮನವರ ಭಾಗಕ್ಕೆ ಜಮೀನು ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 11 ಇ ನಕ್ಷೆ ತಯಾರಿಸಿದ ಮಾಡಿಕೊಂಡಬೇಕೆಂದು ಅದರಲ್ಲಿ ನಮೂದು ಇದೆ ಎಂದು ಹೇಳುತ್ತಾರೆ. ನಿ ಪಿ 3 ರಲ್ಲಿ ಹಕ್ಕುದಾರಿಕೆ ಮತ್ತು ಪಹಣಿಗಳು ಗಂಗಮ್ಮ, ನಾಗರತ್ನಮ್ಮ ಮತ್ತು ಪ್ರಕಾಶ್ ಎಂಬುವವರ ಹೆಸರಿಗೆ ಜಂಟಿಯಾಗಿ ಬರುತ್ತಿದೆ ಎಂದರೆ ಸರಿ. ಅವರುಗಳು ಆ ಆಸ್ತಿಗೆ ಹಕ್ಕುದಾರರು ಎಂದರೆ ಸರಿಯಲ್ಲ. ದಾವಾ ಆಸ್ತಿ ನನಗೆ ಸೇರುತ್ತದೆ ಎಂದು ನಿ ಪಿ 10 ರ ವಿಭಾಗಪತ್ರದಂತೆ ಹೇಳುತ್ತಿದ್ದೇನೆ. ಮೂಲವಿಸ್ತೀರ್ಣಕ್ಕೂ, ಪಹಣಿಯಲ್ಲಿ ಇರುವ ವಿಸ್ತೀರ್ಣಕ್ಕೂ ವ್ಯತ್ಯಾಸ ಇರುವ ಕಾರಣ ಅದನ್ನು ಸರಿಮಾಡಿಸಿಕೊಂಡು ನಮಗೆ ಭಾಗ ನೀಡಬೇಕೆಂದು ನಿಪಿ 10 ರಲ್ಲಿ ಬರವಣಿಗೆ ಆಗಿದೆ. ಅದನ್ನು ಸರಿ ಪಡಿಸಿಕೊಂಡು ಬರೆದುಕೊಡುವವರಿಗೆ ಅವರಿಗೆ ಹಕ್ಕು ಇದೆ ಎಂದರೆ ಸರಿ.

ಈ ದಾವೆಯಲ್ಲಿ ನಾಗರತ್ನಮ್ಮ ಮತ್ತು ಪ್ರಕಾಶ್ ರವರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ. ಅವರಿಬ್ಬರು ಈ ದಾವೆಯನ್ನು ಹಾಕಿಲ್ಲ ಎಂದರೆ ಸಾಕ್ಷಿ ಅವರು ಹೇಳಿದ ಮೇರೆಗೆ ಈ ದಾವೆ ಹೂಡಿದ್ದೇನೆ ಎನ್ನುತ್ತಾರೆ. ಆ ರೀತಿ ಹೇಳಿದ್ದಾರೆ ಎಂದು ವಾದಪತ್ರದಲ್ಲಿ ನಾನು ಬರೆಯಿಸಿಲ್ಲ. ನಿ ಪಿ 10 ರಲ್ಲಿ ನಮ್ಮ ಭಾಗಕ್ಕೆ ದಾವಾ ಆಸ್ತಿ ಬರದೇ ಇದ್ದರೂ ಸಹ ಸುಳ್ಳು ಹೇಳಿ ಈ ದಾವೆಯನ್ನು ಹೂಡಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿ ಅಳೆಯಲು ಬಂದಾಗ ನಮ್ಮ ಸುತ್ತ ಮುತ್ತಲಿನ ಜಮೀನಿನವರಾದ ಯಶೋಧ, ಹುಚ್ಚಯ್ಯ, ಇವರುಗಳಿಗೆ ನೋಟೀಸ್ ಕೊಟ್ಟಿದ್ದರು. ನಿ ಪಿ 5 ನ್ನು ತಯಾರಿಸುವ ಸಮಯದಲ್ಲಿ ನೋಟೀಸ್ ನೀಡಿದ ಬಾಬ್ತು ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇಲ್ಲ. ಮುಂದಿನ ದಿನಾಂಕದಂದು ನಾನು ಅದನ್ನು ಹಾಜರುಪಡಿಸುತ್ತೇನೆ.

ನಿಪಿ 6 ರಲ್ಲಿ ಯಶೋಧ ಇವರು ಬೆಂಗಳೂರಿನಲ್ಲಿ ವಾಸವಾಗಿರುವುದರಿಂದ ಅವರಿಗೆ ನೋಟೀಸ್ ಜಾರಿ ಮಾಡಿಲ್ಲ ಎಂದು ನಮೂದು ಇದೆ ಎಂದರೆ ಸರಿ. ನಾನು ಯಶೋಧ ರವರಿಗೆ ನೋಟೀಸ್ ಜಾರಿ ಮಾಡಿಸದೆ ಸರ್ವೇಯರ್ ಜೊತೆಗೆ ಶಾಮೀಲಾಗಿ ನಿ ಪಿ 5 ರಿಂದ ನಿ ಪಿ 7 ನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನಗೆ ಅಳತೆ ಬಗ್ಗೆ ಯಾವುದೆ ಮಾಹಿತಿ ಇಲ್ಲದೆ ಇದ್ದರೂ

ಸಹ 1ನೆ ಪ್ರತಿವಾದಿ ಯಶೋಧರಿಗೆ ನೋಟೀಸ್ ಜಾರಿ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 11 ನ್ನು ದಾವಾ ಸ.ನಂ. ನಮಗೆ ಸೇರಿರುವುದರಿಂದ ಆ ಬಗ್ಗೆ ದಾವೆ ಇರುವುದರಿಂದ ಅದನ್ನು ಹಾಜರುಪಡಿಸಿದ್ದೇನೆ. 1ನೆ ಪ್ರತಿವಾದಿ ದಾವಾ ಸ್ವತ್ತನ್ನು ಕ್ರಯಪತ್ರದ ಆಧಾರದ ಮೇಲೆ ಖರೀದಿಸಿದ್ದು ನಿ ಪಿ 11 ರಲ್ಲಿ ಇರುವ ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆಂದು ಆ ದಾವೆ ಹೂಡಿದ್ದಾರೆ ಎಂದರೆ ಸರಿ.

ದಿನಾಂಕ : 11.06.2000 ಮತ್ತು 05.10.2005 ರಂದು ಖರೀದಿಸಿದ ಆಸ್ತಿಗೆ 1ನೆ ಪ್ರತಿವಾದಿಗೆ ಅಸಲು ದಾವೆ 101/2020 ರಲ್ಲಿ ಪ್ರತಿವಾದಿಗಳು ತೊಂದರೆ ನೀಡಿದ್ದಾರೆಂದು ಶಾಶ್ವತ ಪ್ರತಿಬಂಧಕಾಜ್ಞೆ ದಾವೆ ಹೂಡಿದ್ದಾರೆ ಎಂದರೆ ಸರಿ. ಓ ಎಸ್ 101/2020 ರಲ್ಲಿ ಇರುವ ಎಲ್ಲ ಸ್ವತ್ತುಗಳ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನ ಈ ದಾವೆಯ 1ನೆ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ಓ ಎಸ್ 101/2020 ರ ದಾವಾ ಸ್ವತ್ತುಗಳಲ್ಲಿ 30 ವರ್ಷಗಳ ಹಳೆಯ ಮಾವಿನ ಮರಗಳನ್ನು ಬೆಳೆಸಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವಲ್ಪ ಖಾಲಿ ಜಾಗ ಕೂಡ ಇದೆ ಎಂದು ಹೇಳುತ್ತಾರೆ. ಉಳಿದ ಖಾಲಿ ಜಾಗದಲ್ಲಿ ಬೆಳೆದ ಬೆಳೆಯನ್ನು ಒಕ್ಕಣೆ ಮಾಡಲು ಬಿಟ್ಟುಕೊಂಡಿದ್ದಾರೆ ಎಂದರೆ ಸರಿ. ಕಣ ಮಾಡುವ ಉದ್ದೇಶದಿಂದಲೇ ಆ ಜಾಗವನ್ನು ಬಿಟ್ಟುಕೊಂಡಿದ್ದಾರೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಓ ಎಸ್ 101/2020 ರ ಸ್ವತ್ತು ಸರ್ವೇಯರ್ ರವರು ನಿ ಪಿ 5 ರಲ್ಲಿ ಅಳೆದಿರುವ 1 ಎಕರೆ 15 ಗುಂಟೆ ಆದ ನಂತರ ಸ್ವತ್ತಿನ ಉತ್ತರ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ ಒತ್ತುವರಿ ಮಾಡಿದ್ದಾರೆ ಎಂದು ಹೇಳುತ್ತಾರೆ.

ನಮ್ಮ ತಾತ ಮಾರಾಟ ಮಾಡಿದ ಸಿ ಕೆ ಮಲ್ಲಯ್ಯ ರವರಿಂದ ಖರೀದಿಸಿದ ಆಸ್ತಿಯು ಪ್ರತ್ಯೇಕವಾಗಿದ್ದು 1 ಎಕರೆ 12 ಗುಂಟೆ ಒಂದು ತಾಕು ಹಾಗೂ 25 ಗುಂಟೆ ಇನ್ನೊಂದು ತಾಕು ಇದ್ದು ಅದನ್ನು ಒಂದೇ ಕಡೆ ಮಾಡಿಕೊಳ್ಳಲು ಈ ಸುಳ್ಳು ದಾವೆ ಹಾಕಿದ್ದು ಎಂದರೆ ಸರಿಯಲ್ಲ. ನಮ್ಮ ತಾತ 1952 ರಲ್ಲಿ ಕೊಂಡುಕೊಂಡ ನಂತರ 2017 ರ ವರೆಗೆ ನಾನು ಸ್ವಾಧೀನದಲ್ಲಿರುವ 2 ಎಕರೆ ಸ್ವತ್ತಿಗೆ ಅಳತೆ ಮಾಡಿಸಿರುವುದಿಲ್ಲ. ಸ.ನಂ. 67 ರ ದಕ್ಷಿಣ ದಿಕ್ಕಿಗೆ ನಮಗೆ ಸೇರಿದ 2 ಎಕರೆಗೆ ನಾವಾಗಲಿ, ನನ್ನ ತಾತನಾಗಲಿ ಅಥವಾ ಅವರಿಗೆ ಮಾರಾಟ ಮಾಡಿದ ಸಿ ಕೆ ಮಲ್ಲಯ್ಯರವರಾಗಲಿ ಯಾವಾಗಲೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಿ ಕೆ ಮಲ್ಲಯ್ಯ ರವರಿಂದ ಕೊಂಡುಕೊಳ್ಳುವಾಗ ಅಳತೆ ಮಾಡಿಸಿದ್ದರಾ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಅಳತೆ ಮಾಡಿದ ಬಾಬ್ತು ನಾನು ಯಾವುದೆ ದಾಖಲಾತಿಯನ್ನು ಸರ್ವೇ ಇಲಾಖೆಯಿಂದ ಪಡೆದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಎಸ್ ಜಿ ಆರ್ ವಕೀಲರು ಕಾಲಾವಕಾಶ ಕೋರಿದ್ದು,**

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.